**ಅಸಲು ದಾವಾ ಸಂಖ್ಯೆ: 322/2015 ಡಿ.ಡಬ್ಲ್ಯೂ : 1**

ದಿನಾಂಕ: **26.03.2022** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ವಾದಿ ಪರ ವಕೀಲರಿಂದ :**

ನಾನು ಬಿ.ಕಾಂ ಪದವಿಧರನಾಗಿದ್ದೇನೆ. ವಾದಿಯು ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯ ಗಂಡ ದಾವಾ ಸ್ವತ್ತನ್ನು ಖರೀದಿಸಿರುವ ವಿಚಾರ ನ್ಯಾಯಾಲಯದಿಂದ ಸಮನ್ಸ್ ಪಡೆದ ಬಳಿಕ ನನಗೆ ಗೊತ್ತಾಗಿರುತ್ತದೆ. ಸರ್ವೆ ನಂಬರ್ 9 ರಲ್ಲಿ 2 ಎಕರೆ 30 ಗುಂಟೆ ಜಮೀನು ಇದೆ. ಸದರಿ ಜಮೀನಿನ ಪೂರ್ವಕ್ಕೆ ನಂಜುಂಡೇಗೌಡರ ಜಮೀನು, ಪಶ್ಚಿಮಕ್ಕೆ ಶಿವಣ್ಣನ ಜಮೀನು, ಉತ್ತರಕ್ಕೆ ಬಸವರಾಜುರವರ ಜಮೀನು ಮತ್ತು ದಕ್ಷಿಣಕ್ಕೆ ಎನ್.ಹೆಚ್-48 ರಸ್ತೆ ಇದೆ. ಪ್ರಸ್ತುತ ಸರ್ವೆ ನಂಬರ್ 9ರ ಪಹಣಿಯು ನನ್ನ ತಂದೆಯ ಹೆಸರಿನಲ್ಲಿ ಪೌತಿ ವಾರಸು ಮೂಲಕ ಬರುತ್ತಿದೆ. ನನ್ನ ತಾಯಿಯು 1980ನೇ ಇಸವಿಯಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸರ್ವೆ ನಂಬರ್ 9 ರಲ್ಲಿ ನಮಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ.

ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲಾ ದಾಖಲೆಗಳು ಸೃಷ್ಠಿತ ದಾಖಲೆಗಳಾಗಿವೆ. ವಾದಿಯ ಹೆಸರಿನಲ್ಲಿರುವ ಕ್ರಯಪತ್ರ ಮತ್ತು ಇತರೆ ದಾಖಲೆಗಳು ಸೃಷ್ಠಿತ ದಾಖಲೆಗಳಾಗಿವೆ. ನನ್ನ ತಂದೆಗೆ ಇಬ್ಬರು ಪತ್ನಿಯರು. ನನ್ನ ತಾಯಿ ಪೌತಿಯಾದ ಬಳಿಕ ನನ್ನ ತಂದೆ ಕೆಂಪಮ್ಮರವರನ್ನು ವಿವಾಹವಾಗಿರುತ್ತಾರೆ. ನನ್ನ ತಂದೆಯು 2ನೇ ವಿವಾಹವಾದಾಗ ಜಮೀನಿನ ಎಲ್ಲಾ ವ್ಯವಹಾರಗಳನ್ನು ನನ್ನ ಅಣ್ಣನಿಗೆ ವಹಿಸಿದ್ದರು ಎಂದರೆ ಸರಿಯಲ್ಲ. ನಿಂಗಮ್ಮರವರಿಗೆ ಸರ್ವೆ ನಂಬರ್ 9ರ ಜಮೀನು ಮಂಜೂರಾದಾಗ ನನಗೆ 10 ವರ್ಷ ವಯಸ್ಸಾಗಿತ್ತು.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.